“ನಮ್ಮನ್ನು ಅತ್ತ ಕರೆದೊಯ್ಯಿ, ನಾವು ಅವನನ್ನು ನೋಡಬೇಕು. ನಾವು ಅವನನ್ನು ಹೇಗಾದರೂ ಉಳಿಸಿಕೊಳ್ಳುತ್ತೇವೆ.” ಎಂದು ಸೋದರಿಯರು ಬೀರೀಯನನಲ್ಲಿ ಅಂಗಲಾಚಿದರು.

“ಅವನು ಕ್ಷೇಮವಾಗಿದ್ದಾನೆ. ಅವನೀಗ ಆಕಾಶದಲ್ಲಿದ್ದಾನೆ. ನೀವು ನೋಡುವ ಕಡೆ ಇಲ್ಲ. ಅವನು ಬೇಕೆನಿಸಿದರೆ ನೀವು ಕೂಡ ಆಕಾಶಕ್ಕೆ ಹೋಗಬೇಕು. ಅಲ್ಲಿ ಅವನನ್ನು ನೋಡಬಹುದು. ಅವನು ಅಲ್ಲಿದ್ದಾನೆ ಈಗ.” ಎಂದವನೇ ಆಕಾಶದತ್ತ ಕೈಮಾಡಿ ಒಂದು ನಕ್ಷತ್ರವನ್ನು ತೋರಿಸಿದ. ಬುಲ್ಯೆ ಬುಲ್ಯೆ ಅದನ್ನು ಈವರೆಗೂ ನೋಡಿರಲಿಲ್ಲ.

“ಅಲ್ಲಿದ್ದಾನೆ, ವೊಂಬಾ (ತಾರೆ).”

ಬುಲ್ಯೆ ಬುಲ್ಯೆ ನದಿಯಾಚೆ ಹುಲ್ಲಿನ ಮನೆಯತ್ತ ನೋಡಿದರು. ಅಲ್ಲಿ ವೀಡಾ ಇರಲಿಲ್ಲ. ಅವರು ಅಲ್ಲಿಯೇ ಕುಳಿತು ಚರಮಗೀತೆಯೊಂದನ್ನು ಹಾಡಿದರು. ವೀಡಾನನ್ನು ಇನ್ನು ನೋಡುವುದಿಲ್ಲ ಎಂಬುದು ಅವರಿಗೆ ಮನನವಾಯಿತು. ವಿಧವೆಯರಂತೆ ಅವರಿಬ್ಬರೂ ತಮ್ಮ ತಲೆಗೆ ಒದ್ದೆ ಮಾಡಿದ ಬಿಳಿಯ ಬೂದಿಯನ್ನು ಲೇಪಿಸಿಕೊಂಡರು; ತಮ್ಮ ದೇಹಗಳಿಗೆ ಹಸಿರು ಬಳ್ಳಿಗಳನ್ನು ಕಟ್ಟಿಕೊಂಡರು; ಅಲ್ಲದೆ ರಕ್ತ ಬರುವವರೆಗೂ ದೇಹವನ್ನು ಅಲ್ಲಲ್ಲಿ ಕುಯ್ದುಕೊಂಡರು. ಕೆಲವು ಹೊಗೆಸೊಪ್ಪುಗಳನ್ನು ಸುಟ್ಟು, ತಾವೂ ಅದನ್ನೇ ಸೇದಿದರು.

ಆಗ ಬೀರೀಯನ್ ಗೂಲಾಯ್ಯಾಲೀಯನ್ನು ಕುರಿತು ಹೇಳಿದ, “ಈ ಹುಡುಗಿಯರನ್ನು (ಹಕ್ಕು

